2

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

# ಸರ್ವ ಶಿಕ್ಷಣ ಅಭಿಯಾನ - ಕರ್ನಾಟಕ

## ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು 01

ಸಂಖ್ಯೆ: ಸ.ಶಿ.ಅ/ಒಓಎಸ್‌ಸಿ/ಚಿ.ಅಂ/02/11-12 ದಿನಾಂಕ: 18.04.11

**ಮುದ್ರಣ ಕಾರ್ಯಕ್ಕೆ ಕೊಟೇಶನ್ ಆಹ್ವಾನ**

ಸರ್ವ ಶಿಕ್ಷಣ ಅಭಿಯಾನದ ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯತಂತ್ರದಡಿಯಲ್ಲಿ 09ರಿಂದ 11 ವರ್ಷ ವಯೋಮಾನದಲ್ಲಿರುವ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಸಂಬಂಧಿಸಿದಂತೆ ಭಾಷಾ ಹಾಗೂ ಕೋರ್ ವಿಷಯಗಳಿಗೆ ಸಂಬಂಧಿಸಿದಂತೆ ರಚಿತವಾದ ಸಾಹಿತ್ಯ – 02 ಚಿಣ್ಣರ ಅಂಗಳ ಅಭ್ಯಾಸ ಪುಸ್ತಕಗಳು ಹಾಗೂ 01 ಬೋಧಕರ ಕೈಪಿಡಿ 2011-12ನೇ ಸಾಲಿನಲ್ಲಿ ಮುದ್ರಿಸಿ, ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಿಗೆ ವಿತರಿಸಲು ದರಪಟ್ಟಿಯನ್ನು ಈ ಕಛೇರಿಯೊಂದಿಗೆ ಎಂಪ್ಯಾನಲ್ ಆದ ಅರ್ಹ ಮುದ್ರಣ ಸಂಸ್ಥೆಗಳಿಂದ ಈ ಮೂಲಕ ಆಹ್ವಾನಿಸಲಾಗಿದೆ.

| | |
|---|---|
| **1 ಚಿಣ್ಣರ ಅಂಗಳ – 2 –– ಭಾಷಾ ಪಠ್ಯ ಸಹಿತ ಅಭ್ಯಾಸ ಪುಸ್ತಕ (ಕನ್ನಡ ಹಾಗೂ ಆಂಗ್ಲ ಭಾಷೆಗಳು ಸೇರಿ ಒಂದು ಪಠ್ಯ ಸಹಿತ ಅಭ್ಯಾಸ ಪುಸ್ತಕ)** | |
| ಅಂದಾಜು ಪುಟಗಳ ಸಂಖ್ಯೆ<br><br>ಕಾಗದದ ಅಳತೆ | 124<br>ಹೊರಪುಟಗಳು 04<br>ಒಳಪುಟಗಳು ಹಾಗೂ ಹೊರಪುಟಗಳನ್ನು ಬಹುವರ್ಣದಲ್ಲಿ ಮುದ್ರಿಸಬೇಕು<br>21 X 29 cm |
| ಮುದ್ರಿಸಬೇಕಾದ ಪ್ರತಿಗಳು | 25000 |
| ಒಳಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 80 ಜಿ.ಎಸ್.ಎಂ ಬಿಳಿ ಹಾಳೆ 'ಎ' ದರ್ಜೆ ಮಿಲ್ |
| ಹೊರಪುಟಗಳ ಮುದ್ರಣಕ್ಕೆ ಉಪಯೋಗಿಸಬೇಕಾದ ಕಾಗದ | 220 ಜಿ.ಎಸ್.ಎಂ ಆರ್ಟ್ ಬೋರ್ಡ್ |
| ಬೈಂಡಿಂಗ್ | ಪರ್‌ಫೆಕ್ಟ್ ಬೈಂಡಿಂಗ್ |
| **2 ಚಿಣ್ಣರ ಅಂಗಳ – 2 –– ಕೋರ್ ವಿಷಯಗಳ ಪಠ್ಯ ಸಹಿತ ಅಭ್ಯಾಸ ಪುಸ್ತಕ (ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಷಯಗಳು ಸೇರಿ ಒಂದು ಪಠ್ಯ ಸಹಿತ ಅಭ್ಯಾಸ ಪುಸ್ತಕ)** | |
| ಅಂದಾಜು ಪುಟಗಳ ಸಂಖ್ಯೆ<br><br>ಕಾಗದದ ಅಳತೆ | 114<br>ಹೊರಪುಟಗಳು 04<br>ಒಳಪುಟಗಳು ಹಾಗೂ ಹೊರಪುಟಗಳನ್ನು ಬಹುವರ್ಣದಲ್ಲಿ ಮುದ್ರಿಸಬೇಕು<br>ಮುದ್ರಿಸಬೇಕು.<br>21 X 29 cm |
| ಮುದ್ರಿಸಬೇಕಾದ ಅಂದಾಜು ಪ್ರತಿಗಳು | 25,000 |
| ಒಳಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 80 ಜಿ.ಎಸ್.ಎಂ ಬಿಳಿ ಹಾಳೆ 'ಎ' ದರ್ಜೆ ಮಿಲ್ |
| ಹೊರಪುಟಗಳ ಮುದ್ರಣಕ್ಕೆ ಉಪಯೋಗಿಸಬೇಕಾದ ಕಾಗದ | 220 ಜಿ.ಎಸ್.ಎಂ ಆರ್ಟ್ ಬೋರ್ಡ್ |
| ಬೈಂಡಿಂಗ್ | ಪರ್‌ಫೆಕ್ಟ್ ಬೈಂಡಿಂಗ್ |

| **3 ಚಿಣ್ಣರ ಅಂಗಳ – 2 ಶಿಕ್ಷಕರ ಕೈಪಿಡಿ (ಕನ್ನಡ ಆಂಗ್ಲ ಹಾಗೂ ಹಿಂದಿ ಭಾಷೆಗಳು ಹಾಗೂ ಕೋರ್ ವಿಷಯಗಳಿಗೆ ಸೇರಿ ಒಂದು ಕೈಪಿಡಿ)** | |
|---|---|
| ಅಂದಾಜು ಪುಟಗಳ ಸಂಖ್ಯೆ<br><br><br><br>ಕಾಗದದ ಅಳತೆ | 170<br>ಹೊರಪುಟಗಳು 04<br>ಹೊರಪುಟಗಳನ್ನು ಮಾತ್ರ ಬಹುವರ್ಣದಲ್ಲಿ ಮುದ್ರಿಸಬೇಕು. ಒಳಪುಟಗಳನ್ನು ಕಪ್ಪು ಬಿಳುಪು ಬಣ್ಣದಲ್ಲಿ ಮುದ್ರಿಸಬೇಕು.<br>21 X 29 cm |
| ಮುದ್ರಿಸಬೇಕಾದ ಅಂದಾಜು ಪ್ರತಿಗಳು | 3,000 |
| ಒಳಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 70 ಜಿ.ಎಸ್.ಎಂ ಬಿಳಿ ಹಾಳೆ 'ಎ' ದರ್ಜೆ ಮಿಲ್ |
| ಹೊರಪುಟಗಳ ಮುದ್ರಣಕ್ಕೆ ಉಪಯೋಗಿಸಬೇಕಾದ ಕಾಗದ | 220 ಜಿ.ಎಸ್.ಎಂ ಆರ್ಟ್ ಬೋರ್ಡ್ |
| ಬೈಂಡಿಂಗ್ | ಪರ್‌ಫೆಕ್ಟ್ ಬೈಂಡಿಂಗ್ |

ಸದರಿ ಮುದ್ರಣಕ್ಕೆ ಮತ್ತು ಜಿಲ್ಲಾ ಕೇಂದ್ರಗಳಿಗೆ ಪೂರೈಸಲು ತಗಲುವ ಒಟ್ಟು ಮೊತ್ತವನ್ನು ಎಲ್ಲಾ ತೆರಿಗೆಗಳು ಒಳಗೊಂಡಂತೆ ಈ ಕಛೇರಿಗೆ **ದಿನಾಂಕ: 29.04.2011 ರ ಸಂಜೆ 3.00** ಗಂಟೆಯೊಳಗೆ ತಲುಪುವಂತೆ ಸಲ್ಲಿಸತಕ್ಕದ್ದು. ದರವನ್ನು ಮೂರು ಪುಸ್ತಕಗಳಿಗೆ ( 2 ಅಭ್ಯಾಸ ಪುಸ್ತಕಗಳಿಗೆ ಹಾಗೂ 1 ಶಿಕ್ಷಕರ ಕೈಪಿಡಿಗೆ) ಪ್ರತ್ಯೇಕವಾಗಿ ಪ್ರತಿ ಪುಸ್ತಕದ ಪ್ರತಿ ಪುಟಕ್ಕೆ ಅನ್ವಯಿಸುವಂತೆ ನೀಡಬೇಕು. ದರಗಳು ಕನಿಷ್ಠ 90 ದಿನಗಳ ಅವಧಿಗೆ ಚಾಲ್ತಿಯಲ್ಲಿರಬೇಕು. ಮುದ್ರಣ ಮತ್ತು ಪೂರೈಕೆಯನ್ನು ಕಾರ್ಯಾದೇಶ ನೀಡಿದ 15 ದಿನಗಳೊಳಗೆ ಪೂರ್ಣಗೊಳಿಸಿ ಸೂಚಿತ ಸ್ಥಳಗಳಿಗೆ ಹಂಚತಕ್ಕದ್ದು, ಪ್ರತಿ ದಿನದ ವಿಳಂಬಕ್ಕೆ 0.50 % ನಂತೆ ದಂಡ ವಿಧಿಸಲಾಗುತ್ತದೆ. ದಂಡದ ದರ 10% ಮೀರಿದರೆ ಮುದ್ರಣ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗುತ್ತದೆ. ನಮೂದಿಸಿರುವ ದರವು ಮುದ್ರಣ ವೆಚ್ಚ, ಸಾಗಾಣಿಕೆ, ಡಿ.ಟಿ.ಪಿ, ಟ್ಯಾಕ್ಸ್ ಎಲ್ಲಾ ಒಳಗೊಂಡಿರಬೇಕು.

ಪ್ರತಿ ಜಿಲ್ಲೆಗೆ ಪೂರೈಸಬೇಕಾದ ಪುಸ್ತಕಗಳ ವಿವರವನ್ನು ನಂತರ ನೀಡಲಾಗುವುದು. ಚಿಣ್ಣರ ಅಂಗಳ– **೩ಕ್ಕೆ ಸಂಬಂಧಿಸಿದಂತೆ** ಅಭ್ಯಾಸ ಪುಸ್ತಕಗಳಿಗೆ ಹಾಗೂ ಶಿಕ್ಷಕರ ಕೈಪಿಡಿಗೆ ಸಂಬಂಧಿಸಿದ **ಸಾಹಿತ್ಯದ ಡಿ.ಟಿ.ಪಿಯನ್ನು ಮುದ್ರಕರು ಮಾಡಬೇಕು.** ಅಭ್ಯಾಸ ಪುಸ್ತಕದಲ್ಲಿರುವ ಬಹುವರ್ಣದಲ್ಲಿರುವ ಚಿತ್ರಗಳನ್ನು ಮಾತ್ರ ಈ ಕಛೇರಿಯಿಂದ ಸಾಫ್ಟ್ ಪ್ರತಿ ನೀಡಲಾಗುವುದು. **ಡಿ.ಟಿ.ಪಿ ಪ್ರತಿಗಳು ಈ ಕಛೇರಿಯಿಂದ 2 ರಿಂದ 3 ಬಾರಿ ಪರಿಷ್ಕರಿಸಿ, ಅಂತಿಮ ಪ್ರತಿ ಅನುಮೋದನೆಯಾದ ನಂತರವೇ ಮುದ್ರಣ ಕಾರ್ಯವನ್ನು ಪ್ರಾರಂಭಿಸಬೇಕು.** ಸಂಸ್ಥೆಗಳ ಬಿಲ್ಲುಗಳ ಸಂಗಡ ಮುದ್ರಣ ಕಾರ್ಯದ ಡಿ.ಟಿ.ಪಿ ವಿವರವನ್ನು ಸಿ.ಡಿ ರೂಪದಲ್ಲಿ ಕಛೇರಿಗೆ ಸಲ್ಲಿಸುವುದು ಕಡ್ಡಾಯ. ಆಯ್ಕೆಯಾದ ಸಂಸ್ಥೆಯವರು ಕೊಟೇಶನ್ ಸಂಬಂಧ ಒಟ್ಟು ಮೌಲ್ಯದ ಶೇಕಡ 5 ರಂತೆ ಭದ್ರತಾ ಠೇವಣಿ ಸಂಬಂಧ ಮೊತ್ತವನ್ನು ಬ್ಯಾಂಕ್ ಹುಂಡಿ ರೂಪದಲ್ಲಿ ಸಲ್ಲಿಸಬೇಕು ಹಾಗೂ ನಿಗದಿತ ನಮೂನೆಯಲ್ಲಿ ಕರಾರು ಪತ್ರವನ್ನು ರೂ 50/– ಸ್ಟಾಂಪ್ ಕಾಗದದಲ್ಲಿ ಸಹಿ ಮಾಡಿ ನಿಗದಿತ ಅವಧಿಯೊಳಗೆ ಸಲ್ಲಿಸಬೇಕು.

ಮುದ್ರಣ ಕಾರ್ಯಕ್ಕೆ ಬಳಸುವ ಕಾಗದದ ಸ್ಯಾಂಪಲ್ (ಒಳಪುಟ ಹಾಗೂ ರಕ್ಷಾ ಪುಟ) ಸಂಸ್ಥೆ ಧೃಢೀಕರಿಸಿ ಕೊಟೇಷನ್ ಸಂಗಡ ಸಲ್ಲಿಸುವುದು ಕಡ್ಡಾಯ. ಪುಸ್ತಕಗಳ ಪುಟಗಳ ಸಂಖ್ಯೆ ಕಡಿಮೆ/ಹೆಚ್ಚಾದಲ್ಲಿ Pro-rata ಆಧಾರದಲ್ಲಿ ಕಡಿಮೆ/ ಹೆಚ್ಚುವರಿ ಹಣ ಈ ಕಛೇರಿಯಿಂದ ನೀಡಲಾಗುವುದು. EMD ಮೊತ್ತ ರೂ. 38,600/–ಗಳಿಗೆ ಬ್ಯಾಂಕ್ ಹುಂಡಿ ರೂಪದಲ್ಲಿ ಕೊಟೇಶನ್ ಸಂಗಡ ಸಲ್ಲಿಸುವುದು ಕಡ್ಡಾಯ. ದರಪಟ್ಟಿಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿಟ್ಟು ಅದರ ಮೇಲೆ **'ಚಿಣ್ಣರ ಅಂಗಳ – 2 –– ಅಭ್ಯಾಸ ಪುಸ್ತಕಗಳ ಹಾಗೂ ಬೋಧಕರ ಕೈಪಿಡಿ ಮುದ್ರಣ ಮತ್ತು ವಿತರಣೆಗೆ ಸಂಬಂಧಿಸಿದಂತೆ'**. ಎಂದು ಬರೆದು ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸತಕ್ಕದ್ದು. ತಡವಾಗಿ ಸಲ್ಲಿಸಿದ ದರ ಪಟ್ಟಿಗಳನ್ನು ಅಂಗಿಕರಿಸುವುದಿಲ್ಲ. ಯಾವುದೇ ಕೊಟೇಶನ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕಛೇರಿಯು ಹೊಂದಿದೆ.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ